**ಓ ಎಸ್ ನಂಃ 200/2017**

**ಡಿ ಡಬ್ಲ್ಯೂ ಃ 3**

**ದಿಃ 10.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದ :-**

ಸರ್ವೆ ನಂ. 62/2 ರಲ್ಲಿ ನಾನು ಸೈಯದ್ ರಸೂಲ್ ರವರಿಂದ 39 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ ಹಾಗೂ ಸರ್ವೆ ನಂ. 62/1 ಎ ಕೃಷ್ಣಪ್ಪ ರವರಿಂದ ಸದರಿ ಸರ್ವೆ ನಂ. ನಲ್ಲಿ 13 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ. ಕೆ ಆರ್ ಕೃಷ್ಣಪ್ಪ ರವರಿಂದ 13 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಯಾವ ದಾಖಲಾತಿಯನ್ನು ಪರಿಶೀಲನೆ ಮಾಡಿದ್ದೀರ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಗಳು ಹಾಗೂ 11 ಇ ಸ್ಕೆಚ್ ಪರಿಶೀಲನೆ ಮಾಡಿರುತ್ತೇನೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಪಹಣಿ ಪತ್ರಿಕೆ ಹಾಗೂ ಮ್ಯುಟೇಷನ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರ್ ಆರ್ ಟಿ ಡಿ (139/2003-2004) ರ ಪ್ರಕರಣದಲ್ಲಿ ಸರ್ವೆ ನಂ. 62/2 ಎ ರಲ್ಲಿ ಕೃಷ್ಣಪ್ಪ ನವರ ಹಸರಿಗೆ ಆಗಿರುವ 13 ಗುಂಟೆ ಖಾತೆ ಹಾಗೂ ಮ್ಯುಟೇಷನ್ ನ್ನು ರದ್ದು ಪಡಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ಆದೇಶದ ಪ್ರತಿಯನ್ನು ತಾವು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 62/2 ಎ ರಲ್ಲಿ 13 ಗುಂಟೆ ಜಮೀನನ್ನು ಕೆ ಆರ್ ಕೃಷ್ಣಪ್ಪ ತಮಗೆ ಮಾರಾಟ ಮಾಡುವ ಸಮಯದಲ್ಲಿ ಆತನ ಹೆಸರಿಗೆ ಸದರಿ ಜಮೀನಿನ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. 13 ಗುಂಟೆ ಗೆ ಸಂಬಂಧಪಟ್ಟಂತೆ ನಾನು ನನ್ನ ಹೆಸರಿನಲ್ಲಿರುವ ಕ್ರಯ ಪತ್ರದ ಅನ್ವಯ ಖಾತೆ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ. ನಾನು ಕ್ರಯಕ್ಕೆ ಪಡೆದಿರುವ 13 ಗುಂಟೆ ಜಮೀನಿಗೆ ಹಿಸ್ಸಾ ಪೋಡಿ ನಕ್ಷೆ ಆಗಿದೆ ಎಂದರೆ ಸರಿ. ಸದರಿ ಹಿಸ್ಸಾ ಪೋಡಿಯನ್ನು ದಿಃ 28.08.2020 ರಲ್ಲಿ ಕಂದಾಯ ಇಲಾಖೆಯವರು ರದ್ದು ಪಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು 52 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿದ್ದು ಆನಂತರ 52 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇನೆ. ತಾವು ಬಾಲರಾಜ್ ರವರಿಗೆ 14.08 ಗುಂಟೆ ಯನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ಕೆ ಎನ್ ರಾಘವೇಂದ್ರ ರವರಿಗೆ 4.01 ಗುಂಟೆ ಜಮೀನನ್ನು ಕ್ರಯಕ್ಕೆ ಮಾರಾಟ ಮಾಡಿದ್ದೀರಿ ಎಂದರೆ ಸರಿ. ತಾವು ಸುನೀಲ್ ಬಾಫ್ನ ರವರಿಗೆ 50.04 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿಯಲ್ಲ. ನಾವು ಸುನೀಲ್ ಬಾಫ್ನ ರವರಿಗೆ 36 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇನೆ. ತಾವು ಸದರಿ ಮೂರು ಕ್ರಯದಾರರಿಗೆ 68.04 ಗುಂಟೆ

ಓ ಎಸ್ ನಂಃ 200/2017

ಡಿ ಡಬ್ಲ್ಯೂ ಃ 3

ಜಮೀನಿನಲ್ಲಿ ಮಾರಾಟ ಮಾಡಿದ್ದೀರಿ ಎಂದರೆ ಸರಿಯಲ್ಲ. ರಾಮನಗರ ಜಿಲ್ಲೆಯ, ಭೂದಾಖಲೆಗಳ ಜಂಟಿ ನಿರ್ದೇಶಕರ ಕಛೇರಿಯಲ್ಲಿ ದಿಃ 18.02.2017 ರಂದು ವಿಚಾರಣೆ ಪ್ರಕ್ರಿಯೆಗಳು ತಮಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಸರ್ವೆ ಸೆಟಲ್‌ಮೆಂಟ್ ರವರು ತಯಾರಿಸಿರುವ ಎಲ್ಲಾ ನಕ್ಷೆಗಳನ್ನು ರದ್ದು ಪಡಿಸಲಾಗಿದೆ ಎಂದರೆ ಸರಿ. ಸದರಿ ನಕ್ಷೆಗಳು ರದ್ದಾದ ನಂತರ ಸರ್ವೆ ನಕ್ಷೆಗಳನ್ನು ಮರುಸ್ಥಾಪನೆ ಮಾಡಿರುತ್ತಾರೆ. ತಾವು ದಿಃ 31.07.2017 ರಲ್ಲಿ ಕೆ ಆರ್ ಕೃಷ್ಣಪ್ಪ ನವರು ದಿಃ 28.12.2015 ತಮಗೆ ಮಾಡಿಕೊಟ್ಟಿರುವ ಕ್ರಯದ ಆಧಾರದ ಮೇಲೆ ತಾವು ದಾವಾ ಸ್ವತ್ತಿನ ವಾದಿಯ ಸ್ವಾಧೀನಾನುಭವಕ್ಕೆ ದಕ್ಕೆಯನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯು ಇತ್ಯರ್ಥ ಇರುವಾಗ ತಾವು 68.64 ಗುಂಟೆ ವಿಸ್ತೀರ್ಣದ ಜಮೀನನ್ನು ಸುನೀಲ್ ಬಾಫ್ನ, ರಾಘವೇಂದ್ರ ಹಾಗು ದೇವರಾಜು ರವರಿಗೆ ಮಾರಾಟ ಮಾಡಿದ್ದೀರ ಎಂದರೆ ಸರಿಯಲ್ಲ. ತಾವು ದಿಃ 28.12.2015 ರಲ್ಲಿ ಕೆ ಆರ್ ಕೃಷ್ಣಪ್ಪ ರವರಿಂದ ಕ್ರಯಕ್ಕೆ ಪಡೆದಿರುವ ಚಕ್ಕುಬಂದಿ ಹಾಗೂ ದಾವಾ ಸ್ವತ್ತಿನ ಚಕ್ಕುಬಂದಿ ಬೇರೆ ಬೇರೆ ಎಂದರೆ ಸರಿ. ದಾವಾ ಸ್ವತ್ತಿಗೂ ಮತ್ತು ತಮಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಗೆ ಕ್ರಯ ಪತ್ರ ಆದ ನಂತರ ಆತನೇ ಸ್ವಾಧೀನಾನುಭವದಲ್ಲಿದ್ದಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಯಾರು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸ್ವಾಧೀನದಾರ ಹಾಗೂ ಮಾಲೀಕ ವಾದಿಯೇ ಎಂದರೆ ಸರಿಯಲ್ಲ.

**ಪ್ರತಿವಾದಿ 5 ರಿಂದ 9 ರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**